**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

# ಕ್ರಿ ಮೊ ಸಂಖ್ಯೆ 1282/2023

ಪಿರ್ಯಾದಿ ಃ ರಾಜ್ಯದ ಪರವಾಗಿ ಲಕ್ಕವಳ್ಳಿ ಪೊಲೀಸರು

-ವಿರುದ್ಧ-

ಆರೋಪಿ/ತರು ಃ ಮಂಜುನಾಥ ಬಿನ್ ಲೇಟ್ ರಾಮಸ್ವಾಮಿ

**ದಂ.ಪ್ರ.ಸಂ. ಕಲಂ 313 ರಡಿಯಲ್ಲಿ ಆರೋಪಿಯ ವಿಚಾರಣಾ ಹೇಳಿಕೆ**

ಪ್ರಶ್ನೆ-1ಃ ಅಭಿಯೋಜನೆ ಪರ ಸಾಕ್ಷಿಗಳ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?
ಉತ್ತರ ಃ ಕೇಳಿದ್ದೇನೆ

ಪ್ರಶ್ನೆ-2ಃ ಪ್ರಾಸಾ-1 ಮಂಜುನಾಥ್.ಹೆಚ್. ಪಿ.ಎಸ್.ಐ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03.04.2023 ರಂದು ಸಂಜೆ 07.00 ಗಂಟೆಗೆ ತಾನು ಮತ್ತು ತಮ್ಮ ಸಿಬ್ಬಂದಿಗಳಾದ ಚಾಸಾ-4 ಮತ್ತು 5 ರವರು ಹಲಸೂರು ಗ್ರಾಮದಲ್ಲಿ ಗಸ್ತಿನಲ್ಲಿರುವಾಗ ಬಾತ್ಮೀದಾರರಿಂದ ಮಾರಿದಿಬ್ಬ ಗ್ರಾಮದಲ್ಲಿ ಮಂಜುನಾಥ ಬಿನ್ ರಾಮಸ್ವಾಮಿ ಎಂಬುವವರು ಮನೆಯ ಮುಂಭಾಗದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂಬ ಮಾಹಿತಿ ಬಂದಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-3 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಮಾಹಿತಿಯನ್ನು ಸಿಬ್ಬಂದಿಗಳಿಗೆ ತಿಳಿಸಿ ಹಲಸೂರು ಗ್ರಾಮವನ್ನು ಬಿಟ್ಟು ಮಾರಿದಿಬ್ಬಕ್ಕೆ ಸಂಜೆ 07.10 ಗಂಟೆಗೆ ತಲುಪಿ, ಅಲ್ಲಿ ಬಸ್ ನಿಲ್ದಾಣದಲ್ಲಿದ್ದ ಚಾಸಾ-2 ಮತ್ತು 3 ರವರಿಗೆ ದಾಳಿ ವಿಚಾರ ತಿಳಿಸಿ ಪಂಚರಾಗಿ ಸಹಕರಿಸಲು ಮನವಿ ಮಾಡಿಕೊಂಡು ನೋಟಿಸ್ ಜಾರಿ ಮಾಡಿದ್ದು, ನಂತರ ಅಲ್ಲಿಂದ ಮಾಹಿತಿ ಬಂದ ಸ್ಥಳಕ್ಕೆ 07.20 ಗಂಟೆಗೆ ಪಂಚರೊಂದಿಗೆ ತಲುಪಿರುವುದಾಗಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃಸುಳ್ಳು

ಪ್ರಶ್ನೆ-4 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮಾರಿದಿಬ್ಬದ ಒಂದು ಮನೆಯ ಮುಂಭಾಗದಲ್ಲಿ ಆರೋಪಿಯಾದ ನೀವು ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲವನ್ನು ತೆಗೆದುಕೊಂಡು ನಿಂತಿದ್ದು, ತಮ್ಮನ್ನು ನೋಡಿ ಮನೆಯ ಹಿಂಭಾಗದಲ್ಲಿ ಓಡಿ ಹೋಗಲು ಪ್ರಯತ್ನಿಸಿದ್ದು, ಚಾಸಾ-4 ರವರು ಆತನನ್ನು

ಹಿಡಿದು ತನ್ನ ಮುಂದೆ ಹಾಜರುಪಡಿಸಿದ್ದು, ನಂತರ ಹೆಸರು ಮತ್ತು ವಿಳಾಸ ಕೇಳಲಾಗಿ ಮಂಜುನಾಥ್ ಬಿನ್ ರಾಮಸ್ವಾಮಿ ಎಂದು ತಿಳಿಸಿದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-5 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪಂಚರ ಸಮಕ್ಷಮದಲ್ಲಿ ಪ್ಲಾಸ್ಟಿಕ್ ಚೀಲದಲ್ಲಿರುವ ಮದ್ಯದ ಪೌಚುಗಳನ್ನು ಸುರಿದು ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 30 ಪೌಚುಗಳು ಇದ್ದು, ಅವುಗಳ ಅಂದಾಜು ಮೌಲ್ಯ ರೂ.1054/- ಗಳು ಎಂದು ಪಂಚರು ಅಭಿಪ್ರಾಯ ಪಟ್ಟಿರುತ್ತಾರೆ, ನಂತರ ಸದರಿ ಮದ್ಯವನ್ನು ಮಾರಾಟ ಮಾಡಲು ಯಾವುದಾದರೂ ಪರವಾನಗಿ ಇದೆಯೇ ಎಂದು ಕೇಳಲಾಗಿ ಇಲ್ಲ ಎಂದು, ಅಕ್ರಮವಾಗಿ ಮದ್ಯ ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿದಿರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-6 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ-4 ರವರ ಹಸ್ತ 07.30 ರಿಂದ 07.50 ರವರೆಗೆ ಅಲ್ಲಿಯೇ ವರದಿಯನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ಚಾಸಾ-4 ರವರ ಹಸ್ತ ಪ್ರಕರಣ ದಾಖಲಿಸುವಂತೆ ಠಾಣೆಗೆ ಕಳುಹಿಸಿ ಕೊಟ್ಟಿರುತ್ತೇನೆ, ಪ್ರಕರಣ 08.00 ಗಂಟೆಗೆ ದಾಖಲಾದ ನಂತರ ಪಂಚರ ಸಮಕ್ಷಮ ರಾತ್ರಿ 08.10 ರಿಂದ 09.00 ರವರೆಗೆ ಮಹಜರು ಕ್ರಮವನ್ನು ಜರುಗಿಸಿ, ಸದರಿ ಮದ್ಯವನ್ನು ಅಮಾನತ್ತು ಪಡಿಸಿಕೊಂಡು ಅದನ್ನು ಕೆಂಪು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ದಾರದಿಂದ ಹೊಲೆದು, ಅದಕ್ಕೆ ಅರಗಿನಿಂದ ಎಲ್.ಕೆ.ವಿ. ಎಂದು ಸೀಲು ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-7 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ರಾತ್ರಿ 09.15 ಗಂಟೆ ಸಮಯಕ್ಕೆ ಠಾಣೆಗೆ ಬಂದು ಆರೋಪಿ, ಮಾಲು ಮತ್ತು ಮಹಜರನ್ನು ಠಾಣಾಧಿಕಾರಿಗಳಿಗೆ ಮುಂದಿನ ಕ್ರಮ ಕೈಗೊಳ್ಳುವಂತೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-8 ಃ ಪ್ರಾಸಾ-4 ಟಿ.ಆರ್.ರವಿ ಎ.ಎಸ್.ಐ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03.04.2023 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 05.00 ಗಂಟೆ ಸಮಯದಲ್ಲಿ ಚಾಸಾ-1 ರವರು ಚಾಸಾ-4 ರವರ ಹಸ್ತ ಕಳುಹಿಸಿಕೊಟ್ಟ ವರದಿಯನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ 43/2023 ಅಬಕಾರಿ ಕಾಯ್ದೆ ಕಲಂ 32, 34 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ತಯಾರು ಮಾಡಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ, ನಂತರ ಚಾಸಾ-1 ರವರು ಮಾಲನ್ನು ಹಾಜರುಪಡಿಸಿದ್ದು,

ಅದನ್ನು ಮಾಲುಪಟ್ಟಿ ಸಂಖ್ಯೆ 30/2023 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-9 ಃ ಪ್ರಾಸಾ-5 ಸಿಖಂದರ್ ಪಾಷ.ಡಿ.ಎಸ್. ಪಿ.ಎಸ್.ಐ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 04.04.2023 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಎಸ್.ರವಿ ಅವರಿಂದ ಪಡೆದುಕೊಂಡು ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿದಾರರುಗಳಾದ ಸುರೇಶ್ ಮತ್ತು ವಸಂತಕುಮಾರ್ ರವರ ಹೇಳಿಕೆಗಳನ್ನು ದಾಖಲಿಸಿ, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-10 ಃ ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ, 17.04.2023 ರಂದು ಈ ಪ್ರಕರಣದಲ್ಲಿ ಈಗಾಗಲೇ ಅಮಾನತುಪಡಿಸಿಕೊಂಡಿದ್ದ ಮದ್ಯವನ್ನು ಪೌಚುಗಳನ್ನು ರಾಸಾಯನಿಕ ತಜ್ಞರ ಪರೀಕ್ಷೆಗೆ ಚಿಕ್ಕಮಗಳೂರಿಗೆ ಠಾಣೆಯ ಹೆಡ್ ಕಾನ್ಸ್ಟೇಬಲ್-168 ಶಿವಕುಮಾರ್ ರವರ ಹಸ್ತ ಕಳುಹಿಸಿಕೊಟ್ಟಿದ್ದು, ಅಲ್ಲಿಂದ ನೀಡಿದ ಸ್ವೀಕೃತಿಯನ್ನು ಸ್ವೀಕರಿಸಿಕೊಂಡು ಕೇಸ್ ನ ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-11 ಃ ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 01.06.2023 ರಂದು ಈಗಾಗಲೇ ರಾಸಾಯನಿಕ ತಜ್ಞರಿಗೆ ಕಳುಹಿಸಿಕೊಟ್ಟಿದ್ದ ರಾಸಾಯನಿಕ ವರದಿಯನ್ನು ಸ್ವೀಕರಿಸಿಕೊಂಡು ಕಡತದಲ್ಲಿ ಅಳವಡಿಸಿ ಕೊಂಡಿರುತ್ತೇನೆ, ಅನಂತರ ದಿನಾಂಕ 24.07.2023 ರಂದು ಈ ಪ್ರಕರಣದ ಆರೋಪಿಯು ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡಲು ಸೂಕ್ತ ಪರವಾನಗಿ ಇಲ್ಲದೆ ಇಟ್ಟುಕೊಂಡಿರೋದು ಸಾಬೀತಾದ್ದರಿಂದ ಅವರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 ಅಡಿಯಲ್ಲಿ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-12 ಃ ಪ್ರಾಸಾ-6 ಬಿ.ಎಲ್.ಸುರೇಶ್, ಮುಖ್ಯಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 03.04.2023 ರಂದು ಸಂಜೆ 7-00 ಗಂಟೆಗೆ ಚಾಸಾ-1 ರವರು ಮತ್ತು ತಾನು ಹಲಸೂರು ಗ್ರಾಮದಲ್ಲಿ ಗಸ್ತಿನಲ್ಲಿರುವಾಗ ಚಾಸಾ-1 ರವರಿಗೆ ಬಾತ್ಮೀದಾರರಿಂದ ಮಾರಿದಿಬ್ಬ ಗ್ರಾಮದಲ್ಲಿ ಮಂಜುನಾಥ ಬಿನ್ ರಾಮಸ್ವಾಮಿ ಎಂಬುವವರು ಮನೆಯ ಮುಂಭಾಗದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂಬ ಮಾಹಿತಿ ಬಂದಿದ್ದು, ಮಾಹಿತಿಯನ್ನು ತಮಗೆ ತಿಳಿಸಿ ಹಲಸೂರು ಗ್ರಾಮವನ್ನು ಬಿಟ್ಟು ಮಾರಿದಿಬ್ಬಕ್ಕೆ ಸಂಜೆ 7-10 ಗಂಟೆಗೆ ತಲುಪಿದ್ದು, ಅಲ್ಲಿ ಬಸ್

ನಿಲ್ದಾಣದಲ್ಲಿ ಚಾಸಾ-2 ಮತ್ತು 3 ರವರನ್ನು ಚಾಸಾ-1 ರವರು ಪರಿಚಯ ಮಾಡಿಕೊಂಡು ದಾಳಿ ವಿಚಾರ ತಿಳಿಸಿ ಪಂಚರಾಗಿ ಸಹಕರಿಸಲು ಮನವಿ ಮಾಡಿಕೊಂಡು ನೋಟಿಸ್ ಜಾರಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-13 ಃ ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅಲ್ಲಿಂದ ಮಾಹಿತಿ ಬಂದ ಸ್ಥಳಕ್ಕೆ 7-20 ಗಂಟೆಗೆ ಪಂಚರೊಂದಿಗೆ ತಲುಪಿ ಮಾರಿದಿಬ್ಬದ ಒಂದು ಮನೆಯ ಮುಂಭಾಗದಲ್ಲಿ ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲವನ್ನು ತೆಗೆದುಕೊಂಡು ನಿಂತಿದ್ದು, ತಮ್ಮನ್ನು ನೋಡಿ ಮನೆಯ ಹಿಂಭಾಗದಲ್ಲಿ ಓಡಿ ಹೋಗಲು ಪ್ರಯತ್ನಿಸಿದ್ದು, ತಾನು ಆತನನ್ನು ಹಿಡಿದು ಚಾಸಾ-1 ರವರ ಮುಂದೆ ಹಾಜರುಪಡಿಸಿದ್ದು, ನಂತರ ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಮಂಜುನಾಥ್ ಬಿನ್ ರಾಮಸ್ವಾಮಿ ಎಂದು ತಿಳಿಸಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-14 ಃ ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಪಂಚರ ಸಮಕ್ಷಮದಲ್ಲಿ ಪ್ಲಾಸ್ಟಿಕ್ ಚೀಲದಲ್ಲಿರುವ ಮದ್ಯದ ಪೌಚುಗಳನ್ನು ಸುರಿದು ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ್.ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 30 ಪೌಚುಗಳು ಇದ್ದು, ಅವುಗಳ ಅಂದಾಜು ಮೌಲ್ಯ ರೂ.1,054/- ಗಳು ಎಂದು ಪಂಚರು ಅಭಿಪ್ರಾಯ ಪಟ್ಟಿರುತ್ತಾರೆ, ನಂತರ ಸದರಿ ಮದ್ಯವನ್ನು ಮಾರಾಟ ಮಾಡಲು ಯಾವುದಾದರೂ ಪರವಾನಗಿ ಇದೆಯೇ ಎಂದು ಕೇಳಲಾಗಿ ಇಲ್ಲ ಎಂದು ತಿಳಿಸಿದ್ದು, ಅಕ್ರಮವಾಗಿ ಮದ್ಯ ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-15 ಃ ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ-1 ರವರು ತನ್ನ ಹಸ್ತ 7-30 ರಿಂದ 7-50 ರವರೆಗೆ ಅಲ್ಲಿಯೇ ವರದಿಯನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ತನ್ನ ಹಸ್ತ ಪ್ರಕರಣ ದಾಖಲಿಸುವಂತೆ ಠಾಣೆಗೆ ಕಳುಹಿಸಿಕೊಟ್ಟಿರುತ್ತಾರೆ, ನಂತರ ವರದಿಯನ್ನು ಎಸ್ ಹೆಚ್ ಓ ರವರಿಗೆ ನೀಡಿ ವಾಪಾಸ್ಸು ಸ್ಥಳಕ್ಕೆ ತಾನು ಬಂದಿರುತ್ತೇನೆ, ವರದಿ ದಾಖಲಾದ ಬಗ್ಗೆ ಫೋನ್ ಮುಖಾಂತರ ಚಾಸಾ-1 ರವರಿಗೆ ಎಸ್ ಹೆಚ್ ಓ ರವರು ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-16 ಃ ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಪಂಚರ ಸಮಕ್ಷಮ ರಾತ್ರಿ 8.10 ರಿಂದ 9-00 ರವರೆಗೆ ಮಹಜರು ಕ್ರಮವನ್ನು ಚಾಸಾ-1 ರವರು ಜರುಗಿಸಿ, ಸದರಿ ಮದ್ಯವನ್ನು ಅಮಾನತ್ತು ಪಡಿಸಿಕೊಂಡು ಅದನ್ನು ಕೆಂಪು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ದಾರದಿಂದ ಹೊಲೆದು, ಅದಕ್ಕೆ ಅರಗಿನಿಂದ ಎಲ್.ಕೆ.ವಿ. ಎಂದು ಸೀಲು ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇವೆ, ನಂತರ

ರಾತ್ರಿ 9-15 ಗಂಟೆ ಸಮಯಕ್ಕೆ ಠಾಣೆಗೆ ಚಾಸಾ-1 ರವರು ಬಂದು ಆರೋಪಿ, ಮಾಲು ಮತ್ತು ಮಹಜರನ್ನು ಠಾಣಾಧಿಕಾರಿಗಳಿಗೆ ಮುಂದಿನ ಕ್ರಮ ಕೈಗೊಳ್ಳುವಂತೆ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃಸುಳ್ಳು

ಪ್ರಶ್ನೆ-17 ಃ ಈ ಕೇಸಿನ ಬಗ್ಗೆ ನೀವು ಏನಾದರೂ ಹೇಳುವುದಿದೆಯಾ?

ಉತ್ತರ ಃ ಇಲ್ಲ

ಪ್ರಶ್ನೆ-18 ಃ ನಿಮ್ಮ ಪರವಾಗಿ ಯಾರಾದರೂ ಸಾಕ್ಷಿಗಳಿದ್ದಾರಾ ಮತ್ತು ಯಾವುದಾದರೂ ದಾಖಲೆಗಳಿವೆಯಾ?

ಉತ್ತರ ಃ ಇಲ್ಲ

(ಈ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ನಾನೇ ಯಥಾವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕ ಃ 07.04.20226

ಸಹಿ

**(ಊರ್ಮಿಳ.ವಿ)**

**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.